**ಸಾಕ್ಷಿಯನ್ನು ದಿಃ 21.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಹೆಚ್ ಕೆ ಜೆ ವಕೀಲರಿಂದಃ**

4) ನನ್ನ ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನೆಲ್ಲಾ ನಾನೇ ಹೇಳಿ ಬರೆಸಿದ್ದೇನೆ ಎಂದರೆ ನಿಜವನ್ನೇ ಬರೆಸಿದ್ದೇನೆ. ಅರ್ಜಿಯಲ್ಲಿ ಬರೆದಿರುವ ಅಂಶ ಸತ್ಯವಾಗಿರುತ್ತದೆ. ಅಪಘಾತವಾದ ದಿನಾಂಕ ನೆನಪಿಲ್ಲ. ನನ್ನನ್ನು ಮೊದಲು ಕೆ ಆರ್ ಪೇಟೆ ಆಸ್ಪತ್ರೆಗೆ ದಾಖಲಿಸಿರುತ್ತಾರೆ, ಅಲ್ಲಿಂದ ಎಸ್ ಎಲ್ ಎಸ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನನಗೆ ಪ್ರಜ್ಞೆ ಇಲ್ಲದಿದ್ದ ಕಾರಣ ಆಸ್ಪತ್ರೆಗೆ ಯಾರು ಕರೆದುಕೊಂಡು ಹೋದರೆಂದು ಗೊತ್ತಾಗಲಿಲ್ಲ. ಅಪಘಾತ ರಸ್ತೆಯ ಎಡಭಾಗದಲ್ಲಿ ಆಗಿರುತ್ತದೆ. 1 ನೇ ಎದುರುದಾರ ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾನೆ ಎಂದರೆ ಸರಿಯಲ್ಲ. ನಾನು ಮನೆ ಕೆಲಸ ಮಾಡುತ್ತಿದ್ದೆನು. ನಾನು ತಿಂಗಳಿಗೆ ಹದಿನಾರು ಸಾವಿರ ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ನನಗೆ ಇಬ್ಬರು ಮಕ್ಕಳಿರುತ್ತಾರೆ. ಮಕ್ಕಳಿಬ್ಬರು ಕೂಲಿ ಕೆಲಸ ಮಾಡುತ್ತಾರೆ. ನನ್ನ ಗಂಡ ಗಾರೆ ಕೆಲಸ ಮಾಡುತ್ತಾರೆ. ನನ್ನ ಆದಾಯ ಸಾಭೀತು ಪಡಿಸಲು ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಹಾಜರುಪಡಿಸಲು ಆಗುವುದಿಲ್ಲ ಮತ್ತು ಅವರು ಸಂಬಳ ನಗದುಕೊಡುತ್ತಿದ್ದರು.

5) ಕೆ ಆರ್ ಪೇಟೆ ಆಸ್ಪತ್ರೆಯಲ್ಲಿ ನನಗೆ ಪ್ರಥಮ ಚಿಕಿತ್ಸೆ ನೀಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಎಸ್ ಎಲ್ ಎಸ್ ಆಸ್ಪತ್ರೆಗೆ ನನ್ನನ್ನು ಸೇರಿಸಿದ ದಿನಾಂಕ ನೆನಪಿಲ್ಲ. ಅಲ್ಲಿ ನಾನು 18 ರಿಂದ 20 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ದೂರನ್ನು ನನ್ನ ತಮ್ಮ ನವೀನ್ ಕುಮಾರ್ ನೀಡಿರುತ್ತಾನೆ. ಅಪಘಾತದಲ್ಲಿ ನನ್ನ ತಮ್ಮನಿಗೂ ಸಹ ಪೆಟ್ಟಾಗಿತ್ತು. ಆಸ್ಪತ್ರೆಗೆ ನಾನೊಬ್ಬಳೇ ದಾಖಲಾಗಿರುತ್ತೇನೆ ಎಂದರೆ ಸರಿ. ದೂರು ನೀಡುವಾಗಲೂ ನನಗೆ ಪ್ರಜ್ಞೆ ಇರಲಿಲ್ಲ. ನಾವು ಹೋಗುತ್ತಿದ್ದ ಜುಪಿಟರ್ ವಾಹನದ ಮಾಲೀಕರು ಯಾರೆಂದು ಗೊತ್ತಿಲ್ಲ.

6) ನನಗೆ ಪ್ರಜ್ಞೆ ಬಂದಾಗ ಪೊಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದು ಕೊಂಡಿರುತ್ತಾರೆ. ಆ ಸಮಯದಲ್ಲಿ 1 ನೇ ಎದುರುದಾರ ಆಸ್ಪತ್ರೆಗೆ ಬಂದು ನನ್ನನ್ನು ಭೇಟಿ ಆಗಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಸಾಕಷ್ಟು ವಾಹನಗಳು ರಸ್ತೆಯಲ್ಲಿ ಓಡಾಡುತ್ತಿದ್ದವು ಎಂದರೆ ಸರಿ. ಅಪಘಾತವನ್ನು ನೋಡಿದ ಬಗ್ಗೆ ಪ್ರತ್ಯಕ್ಷದರ್ಶಿಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಊರಿನಲ್ಲಿ ನಾವು ವ್ಯವಸಾಯ ಮಾಡುತ್ತಿದ್ದು, ನನ್ನ ಗಂಡನ ಹೆಸರಿನಲ್ಲಿ ಜಮೀನು ಇದೆ ಎಂದರೆ ಸರಿಯಲ್ಲ. ನಾನು ಈಗ ಮೊದಲಿನಂತೆ ಆರೋಗ್ಯವಾಗಿ ಕೆಲಸ ಮಾಡಿಕೊಂಡು ಇರುತ್ತೇನೆ ಎಂದರೆ ಸರಿಯಲ್ಲ. ನಾಲ್ಕು ತಿಂಗಳ ಹಿಂದೆ ಕೊನೆಯ ಬಾರಿ ವೈದ್ಯರ ಬಳಿಗೆ ಹೋಗಿರುತ್ತೇನೆ. ಈ ಬಗ್ಗೆ ಒಪಿಡಿ ದಾಖಲೆ ಹಾಜರುಪಡಿಸಿದ್ದೇನೆ.

7) 1 ನೇ ಎದುರುದಾರ ಒಬ್ಬನೇ ಬರುತ್ತಿದ್ದನು ಎಂದರೆ ಸರಿ. ಆತ ಯಾವ ಊರಿನವರು ಎಂದು ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಬಿಲ್‌ಗಳು ಸೃಷ್ಟಿತ ಬಿಲ್ ಗಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ ಗಳಲ್ಲಿ ಬಿಲ್ ಸಂಖ್ಯೆ 3 ಮತ್ತು 4 ರಲ್ಲಿ 20.09.2020 ಎಂದು ದಿನಾಂಕ ನಮೂದಾಗಿದೆ ಎಂದರೆ ಅದು ತಪ್ಪಾಗಿರುತ್ತದೆ. ನನ್ನ ತಲೆಗೆ ಆದ ಪೆಟ್ಟುಗಳಿಗೆ ಸಂಬಂಧಪಟ್ಟಂತೆ ಔಷಧಿ ನೀಡಿರುವುದಿಲ್ಲ ಸಾಮಾನ್ಯವಾಗಿ ನೀಡುವ ಔಷಧಿಗಳನ್ನು ಪಡೆದುಕೊಂಡಿರುವುದು ಬಿಲ್‌ಗಳಲ್ಲಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಟರಾಜು ನನ್ನ ತಮ್ಮ ಆದರೆ ಆತನನ್ನು ನವೀನ್ ಕುಮಾರ್ ಎಂದು ಕರೆಯುತ್ತೇವೆ. ನಮಗೆ ಊರಿನಲ್ಲಿ ಸಾಕಷ್ಟು ಆಸ್ತಿ ಇರುವ ಕಾರಣ ನನಗೆ ಆದಾಯ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ.

8) ನಾನೇ ಠಾಣೆಗೆ ಹೋಗಿರುವುದಿಲ್ಲ. ಎಸ್ ಎಲ್ ಎಸ್ ಆಸ್ಪತ್ರೆಯಲ್ಲಿ ಡಾಃ ಸತೀಶ್ ನನಗೆ ಚಿಕಿತ್ಸೆ ನೀಡಿರುತ್ತಾರೆ. ಅಪಘಾತವಾದ ಸ್ಥಳದಲ್ಲಿ ರಸ್ತೆಯ ಅಗಲ ಸುಮಾರು 40 ರಿಂದ 50 ಅಡಿ ಇರುತ್ತದೆ ಎಂದರೆ ಸರಿ. ಆದ್ದರಿಂದ ಎದುರು ಬರುವ

ವಾಹನ ಕಾಣುತ್ತದೆ ಎಂದರೆ ಅಲ್ಲಿ ತಿರುವು ಇರುವ ಕಾರಣ ಕಾಣುತ್ತಿರಲಿಲ್ಲ. ನಾನು ಮೈಸೂರಿನಲ್ಲಿ ವಾಸ ಇದ್ದೇನೆ. 2 ನೇ ಎದುರುದಾರರನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.